ಓ.ಎಸ್ಃ 364-2008

ಡಿ. ಡಬ್ಲ್ಯೂ ಃ 13

**<u>ಸಾಕ್ಷಿಗೆ ದಿನಾಂಕ 06.12.2021 ರಂದು ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ವಾದಿ ಪರ ವಕೀಲರಿಂದ</u>**

ಪ್ರತಿವಾದಿಯಿಂದ ದಾವ ಷೆಡ್ಯೂಲ್ ಸ್ವತ್ತನ್ನು ಖರೀದಿಸಿರುತ್ತೇನೆ 5 ಮತ್ತು 6 ನೇ ಪ್ರತಿವಾದಿಗೆ ವಿಭಾಗದ ಮೂಲಕ ಸದರಿ ಸ್ವತ್ತು ಬಂದಿರುತ್ತದೆ. ನಾನು ವಿಭಾಗ ಪತ್ರವನ್ನು ನೋಡಿಲ್ಲ, ಖಾತೆ ಬದಲಾವಣೆಯಾದ ದಾಖಲೆಗಳನ್ನು ನೋಡಿರುತ್ತೇನೆ. ಯಾವ ಉದ್ದೇಶಕ್ಕಾಗಿ ಸದರಿ ಸ್ವತ್ತನ್ನು ನನಗೆ ಮಾರಾಟ ಮಾಡಿರುತ್ತಾರೆ ನನಗೆ ಗೊತ್ತಿಲ್ಲ. ನನಗೆ ವಾದಿ ಮತ್ತು 1 ರಿಂದ 7 ನೇ ಪ್ರತಿವಾದಿಗಳ ಪರಿಚಯವಿದೆ. 5 ಮತ್ತು 6ನೇ ಪ್ರತಿವಾದಿಗಳಿಗೆ ಪಾಲುಪಟ್ಟಿಯ ಮೂಲಕ ಎಷ್ಟು ಸ್ವತ್ತುಗಳು ಬಂದಿತ್ತು ನನಗೆ ಗೊತ್ತಿಲ್ಲ. ದಾವ ಷೆಡ್ಯೂಲ್ ಸ್ವತ್ತಿನಲ್ಲಿ ವಾದಿಗೂ ಸಹಾ ಭಾಗ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಕ್ರಯಕ್ಕೆ ಪಡೆದುಕೊಳ್ಳುವಾಗ ವಾದಿ ಬೇರೆ ವಾಸವಾಗಿದ್ದರು ಎಂದು ನುಡಿಯುತ್ತಾರೆ, ಬೇರೆ ವಾಸವಿದ್ದ ಬಗ್ಗೆ ದಾಖಲೆಗಳನ್ನು ನೋಡಿಲ್ಲ. ವಾದಿಗೆ ಮೋಸ ಮಾಡುವ ಉದ್ದೇಶದಿಂದ 5 ಮತ್ತು 6ನೇ ಪ್ರತಿವಾದಿಗಳೊಂದಿಗೆ ಸೇರಿಕೊಂಡು ಸದರಿ ಸ್ವತ್ತನ್ನು ಕ್ರಯಕ್ಕೆ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. 5 ಮತ್ತು 6ನೇ ಪ್ರತಿವಾದಿ ರವರಿಗೆ ಸ್ವತ್ತನ್ನು ಮಾರಾಟ ಮಾಡುವ ಯಾವುದೇ ಅಧಿಕಾರವಿರಲಿಲ್ಲ ಎಂದರೆ ಸರಿಯಲ್ಲ. ವಾದಿಗೆ ಭಾಗಾಂಶ ನೀಡಬೇಕಾಗುತ್ತದೆ ಎಂಬ ದುರುದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ